ಸಿ.ಸಿ..ನಂ.200–24

ಪಿ.ಡಬ್ಲ್ಯೂ–1

ದಿನಾಂಕ.13–01–2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**<u>ಪಾಟೀ ಸವಾಲುಃ</u> ಆರೋಪಿ ಪರ ಶ್ರೀಮತಿ ಪಿ.ಎಲ್ ಎನ್ ವಕೀಲರಿಂದಃ**

1. ನಾನು ಪಿರ್ಯಾದಿದಾರರ ಸಂಸ್ಥೆಯಲ್ಲಿ 2016 ರಿಂದ ಕರ್ತವ್ಯ ನಿರ್ವಹಿಸುತಿದ್ದೇನೆ .ನಮ್ಮ ಸಂಸ್ಥೆಯಲ್ಲಿ ಎಷ್ಟು ಜನ ಸದಸ್ಯರು ಎಂದು ನನಗೆ ಹೇಳಲಾಗುವುದಿಲ್ಲ . ಒಬ್ಬ ವ್ಯಕ್ತಿ ನಿಮ್ಮ ಬಳಿಯಲ್ಲಿ ಸಾಲ ಕೇಳಿ ಕೊಂಡು ಬಂದಾಗ ಆ ವ್ಯಕ್ತಿಗಳಿಂದ ಕೆಲವು ದಾಖಲಾತಿ ಪಡೆದು ಕೊಳ್ಳುತ್ತಿರಿ ಎಂದರೆ ಮೊದಲು ಆತನು ನಮ್ಮ ಸದಸ್ಯನಾ ಎಂದು ದಾಖಲಾತಿ ಪರೀಶಿಲನೆ ಮಾಡಿ ನೋಡುತ್ತೇವೆ. ನಂತರದಲ್ಲಿ ಉಳಿದ ದಾಖಲಾತಿ ಪರಿಶಿಲಿಸುತ್ತೆವೆ . ಆರೋಪಿಯು ಸಾಲವನ್ನು ನಿಮ್ಮ ಸಂಸ್ಥೆಗೆ ಕೇಳಲು ಬಂದಾಗ ಆತನ ಜೊತೆಗೆ ಯಾರನ್ನಾದರೂ ಕರೆದುಕೊಂಡು ಬಂದಿದ್ದನಾ ಎಂದರೆ ನನಗೆ ನೆನಪಿಲ್ಲ. ಆರೋಪಿಗೆ ಕ್ಯಾಶ್ ಕ್ರೆಡಿಟ್ ಸಾಲ ಕೊಡಲಾಗಿರುತ್ತದೆ . ಆ ಸಾಲಕ್ಕೆ ಜಾಮಿನುದಾರರಾಗಿ ಇಬ್ಬರು ಇದ್ದರು . ಸಾಮಾನ್ಯವಾಗಿ ಸಾಲದ ಅರ್ಜಿಯನ್ನು ಬರೆಯುವಾಗ ನೀವು ಅರ್ಜಿದಾರರ ಮತ್ತು ಜಾಮಿನುದಾರರ ಸಹಿಗಳನ್ನು ದಾಖಲಾತಿ ಮೇಲೆ ಪಡೆದುಕೊಳ್ಳುತ್ತಿರಿ ಎಂದರೆ ಅರ್ಜಿಯನ್ನು ಸಾಲಗಾರನೆ ಬರ್ತಿ ಮಾಡಿ ಕೊಡುತ್ತಾನೆ ಸಾಲದ ಹಣ ಮಂಜೂರು ಅದ ಮೇಲೆ ದಾಖಲಾತಿಗಳ ಮೇಲೆ ಸಾಲಗಾರರ ಮತ್ತು ಜಾಮಿನುದಾರ ಸಹಿ ಪಡೆದುಕೊಳ್ಳುತ್ತೇವೆ . ನಿಮ್ಮ ಸಂಸ್ಥೆಯಲ್ಲಿ ಸಾಲ ನೀಡುವಾಗ ಬದ್ರತೆಗಾಗಿ ಏನೆಲ್ಲಾ ದಾಖಾಲತಿ ಪಡೆದುಕೊಳ್ಳುತ್ತಿರಾ ಎಂದರೆ ಆಯಾ ಸಾಲಕ್ಕೆ ಆಯಾ ವ್ಯಕ್ತಿಗೆ ಸಂಬಂದಿಸಿದಂತೆ ದಾಖಲಾತಿ ಪಡೆದುಕೊಳ್ಳುತ್ತೆವೆ . ನಿಮ್ಮ ಸಂಸ್ಥೆಯಲ್ಲಿ ಸಾಲ ನೀಡುವಾಗ ಸಾಲಗಾರನು ಬದ್ರತೆಗಾಗಿ ಎಲ್ ಐ ಸಿ ಬಾಂಡ ನೀಡುವುದು ಕಡ್ಡಾಯವಾಗಿರುತ್ತದೆ ಎಂದರೆ ಇಲ್ಲ . ಈ ಪ್ರಕರಣದಲ್ಲಿ ಆರೋಪಿ ಕಡೆಯಿಂದ ವಿಮಾ ಪಾಲಿಸಿ ಸಂಖ್ಯೆ 607025339 ಎರಡೂವರೆ ಲಕ್ಷ ಮೊತ್ತದ ಎಲ್ ಐ ಸಿ ಬಾಂಡ ಮತ್ತು 607025337 ಎರಡು ಲಕ್ಷದ ಮೊತ್ತ ಎಲ್ ಐ ಸಿ ಬಾಂಡ ಪಡೆದುಕೊಂಡಿರುತ್ತಿರಿ ಎಂದರೆ ಬದ್ರತೆಗಾಗಿ ಪಡೆದುಕೊಂಡಿರುತ್ತೇವೆ . ನೀವೇ ಹಾಜರ ಪಡಿಸಿದ ದಾಖಲಾತಿಯಂತೆ ಎಲ್ ಐ ಸಿ ಪ್ರಿಮಿಯಮ್

ಹಣವನ್ನು ನೀವೆ ತುಂಬಿರುತ್ತಿರಾ ಎಂದರೆ ಆರೋಪಿಯು ನೀಡಿರುವ ಮನವಿಯ ಮೇರೆಗೆ ಎಲ್ ಐ ಸಿ ಪ್ರಿಮಿಯಮ ಹಣವನ್ನು ಅವರ ಸಾಲದಿಂದಲೇ ಕಟ್ ಮಾಡಲಾಗಿರುತ್ತದೆ . ಕ್ಯಾಶ್ ಕ್ರೆಡಿಟ್ ಸಾಲ ರೂ 2,50,000 ಹಣವನ್ನು ಅರೋಪಿಗೆ ನೀಡಲಾಗಿರುತ್ತದೆ . ಒಬ್ಬ ವ್ಯಕ್ತಿ ಸಾಲವನ್ನು ಮರು ಪಾವತಿ ಮಾಡಿದರೆ ಆ ಎಲ್ ಐಸಿ ಬಾಂಡ ನ ಹಣವನ್ನು ನೀವು recover ಮಾಡಿಕೊಳ್ಳುತ್ತಿರಿ ಎಂದರೆ ಸರಿಯಲ್ಲ . ನೀವು ಈಗಾಗಲೆ ಆರೋಪಿ ಕಡೆಯಿಂದ ಪೂರ್ತಿ ಸಾಲದ ಹಣವನ್ನು ಮರು ಪಾವತಿ ಮಾಡಿಕೊಂಡಿರುತ್ತಿರಿ ಎಂದರೆ ಸರಿಯಲ್ಲ .

( ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ಕಾಲಾವಕಾಶ ನೀಡಲಾಯಿತು .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.